# “ಕ್ರಾಂತಿ ಚಿರಾಯುವಾಗಲಿ, ಸಾಮ್ರಾಜ್ಯವಾದ ನಶಿಸಲಿ ಎಂಬುದೇ ನಮ್ಮ ಉದ್ದೇಶ”

## ಭಗತ್ ಸಿಂಗ್‌ರ ನ್ಯಾಯಾಲಯ ಹೇಳಿಕೆ

ಮೈ ಲಾರ್ಡ್ಸ್,

ನಾವು ವಕೀಲರಲ್ಲ, ನಮಗೆ ಇಂಗ್ಲೀಷ್ ಭಾಷೆಯ ಮೇಲೆ ಪಟ್ಟು ಇಲ್ಲ, ನಾವು ಡಿಗ್ರಿ ಪಡೆದವರೂ ಅಲ್ಲ. ಆದ್ದರಿಂದ ದಯವಿಟ್ಟು ನಮ್ಮಿಂದ ನುರಿತ ಭಾಷಣಕಾರನ ಮಾತುಗಳನ್ನು ನಿರೀಕ್ಷಿಸಬೇಡಿ. ಆದ್ದರಿಂದ ತಾವು ನಮ್ಮ ಹೇಳಿಕೆಯಲ್ಲಿನ ಭಾಷಾ ಸಮಸ್ಯೆಗೆ ಹೋಗುವ ಬದಲಾಗಿ ಅದರ ನಿಜವಾದ ಭಾವವನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕೆಂದು ನಾವು ಕೇಳಿಕೊಳ್ಳುತ್ತೇವೆ.

ಇತರ ಅಂಶಗಳನ್ನು ನಮ್ಮ ವಕೀಲರಿಗೆ ಬಿಟ್ಟು ಒಂದು ಅಂಶಕ್ಕೆ ಮಾತ್ರ ನಾನು ಸೀಮಿತಗೊಳ್ಳುತ್ತೇನೆ. ಈ ಕೇಸಿನಲ್ಲಿ ಆ ಅಂಶವು ಬಹಳ ಮುಖ್ಯವಾದುದು. ಆ ಅಂಶವೇನೆಂದರೆ ನಮ್ಮ ಉದ್ದೇಶಗಳೇನಿದ್ದವು ಮತ್ತು ನಾವು ಎಷ್ಟರಮಟ್ಟಿಗೆ ಅಪರಾಧಿಗಳಾಗಿದ್ದೇವೆ ಎಂಬುದು. ಇಂತಹ ಸಂಕೀರ್ಣವಾದ ಪ್ರಶ್ನೆ ಮಾಡಲು, ನಮ್ಮನ್ನು ಸ್ಫೂರ್ತಿಗೊಳಿಸಿದ ಆ ಮಾನಸಿಕ ಸ್ಥಿತಿಯನ್ನು ಅಷ್ಟು ಉನ್ನತ ಮಟ್ಟಕ್ಕೆ ನಿಮ್ಮೆದುರು ಅಭಿವ್ಯಕ್ತಿಸಲು ಯಾರಿಂದಲೂ ಸಾಧ್ಯವಿಲ್ಲ. ಖ್ಯಾತ ನ್ಯಾಯವಾದಿ ಸೋಲೊಮಾನ್‌ರ ಪ್ರಕಾರ ಒಬ್ಬರನ್ನು, ಅವರ ಉದ್ದೇಶವು ಕಾನೂನಿಗೆ ವಿರುದ್ಧವಾಗಿಲ್ಲದಿದ್ದರೆ ಅವರನ್ನು ಕ್ರಿಮಿನಲ್ ಅಪರಾಧಿಗಳಾಗಿ ಶಿಕ್ಷಿಸಬಾರದು. ನಮ್ಮ ಉದ್ದೇಶವನ್ನು ಮತ್ತು ಅಪರಾಧವನ್ನು ಗಣನೆ ಮಾಡುವಾಗ ಇದನ್ನು ನೀವು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ನಾವು ಬಯಸುತ್ತೇವೆ.

ನಾವು ಸೆಷನ್ಸ್ ನ್ಯಾಯಲಯದಲ್ಲಿ ಒಂದು ಲಿಖಿತ ಹೇಳಿಕೆಯನ್ನು ಮಂಡಿಸಿದ್ದೇವೆ. ಆ ಹೇಳಿಕೆಯು ನಮ್ಮ ಗುರಿಯನ್ನು ವಿವರಿಸುತ್ತದೆ. ಅದೇ ರೀತಿ ನಮ್ಮ ಉದ್ದೇಶವನ್ನು ವಿವರಿಸುತ್ತದೆ. ಆದರೆ ಪ್ರಜ್ಞಾವಂತ ನ್ಯಾಯಾಧೀಶರು ಅದನ್ನು ಪೆನ್ನಿನ ಒಂದು ಗೆರೆಯಿಂದ ತಳ್ಳಿಹಾಕಿ ಹೀಗೆ ಹೇಳಿದರು - “ಸಾಮಾನ್ಯವಾಗಿ ಒಬ್ಬರು ಹೇಗೆ ಅಥವಾ ಏಕೆ ಅಪರಾಧವನ್ನು ಮಾಡಿದರು ಎಂಬುದು ಕಾನೂನಿನ ಕಾರ್ಯಾಚರಣೆಯನ್ನು ಪ್ರಭಾವಿಸುವುದಿಲ್ಲ. ಈ ದೇಶದಲ್ಲಿ ಕಾನೂನು ಭಾಷ್ಯೀಕರಣವು, ಅಪರಾಧದ ಗುರಿಯು ತುಂಬ ವಿರಳವಾಗಿ ಉಲ್ಲೇಖಿಸಲ್ಪಟ್ಟಿದೆ.”

ಮೈ ಲಾರ್ಡ್ಸ್, ನಮ್ಮ ವಿರೋಧ ಏನೆಂದರೆ, ಆಯಾ ಸಂದರ್ಭಗಳಲ್ಲಿ ನಮ್ಮ ಕಾರ್ಯಾಚರಣೆಯ ಫಲಿತಾಂಶ ಇಲ್ಲವೆ ನಮ್ಮ ಹೇಳಿಕೆಯ ಮಾನಸಿಕ ಅಂಶಗಳ ಆಧಾರದಲ್ಲಿ ಮಾನ್ಯ ನ್ಯಾಯಾಧೀಶರು ತೀರ್ಪು ನೀಡಬೇಕಿತ್ತು. ಆದರೆ ಅವರು ಈ ಯಾವ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ.

ಗಮನಿಸಬೇಕಾದ ಅಂಶವೇನೆಂದರೆ ನಾವು ಅಸೆಂಬ್ಲಿಯಲ್ಲಿ ಎಸೆದ ಎರಡು ಬಾಂಬುಗಳು ಯಾರನ್ನೂ ದೈಹಿಕವಾಗಿ ಅಥವಾ ಆರ್ಥಿಕವಾಗಿ ಹಾನಿಗೊಳಿಸಿಲ್ಲ. ಹಾಗಾಗಿ ನಮಗೆ ವಿಧಿಸಿದ ಶಿಕ್ಷೆಯು ತುಂಬಾ ಕಠಿಣವಾದುದು ಅಷ್ಟೇ ಅಲ್ಲ, ಸೇಡಿನದು ಆಗಿದೆ. ಅದಕ್ಕಿಂತ ಹೆಚ್ಚಾಗಿ ಉದ್ದೇಶವು ವ್ಯಕ್ತಿಯ ಮನಃಸ್ಥಿತಿಯನ್ನು ತಿಳಿಸುತ್ತದೆ ಮತ್ತು ಒಬ್ಬನ ಉದ್ದೇಶವನ್ನು ಗಮನಕ್ಕೆ ತೆಗೆದುಕೊಳ್ಳದೆ ಯಾರು ಯಾರಿಗೂ ನ್ಯಾಯವನ್ನು ಕೊಡಲಾರರು. ಉದ್ದೇಶವನ್ನು ನಾವು ನಿರ್ಲಕ್ಷಿಸುತ್ತೇವೆಂದರೆ, ಪ್ರಪಂಚದ ಅತಿ ದೊಡ್ಡ ಜನರಲ್‌ಗಳೆಲ್ಲಾ ಸಾಮಾನ್ಯ ಕೊಲೆಗಾರರಂತೆ ಕಾಣಿಸಿಕೊಳ್ಳುತ್ತಾರೆ. ಕಂದಾಯ ಅಧಿಕಾರಿಗಳು ಕಳ್ಳರು ಮತ್ತು ಮೋಸಗಾರರಾಗುತ್ತಾರೆ. ನ್ಯಾಯಾಧೀಶರು ಕೂಡ ಕೊಲೆ ಆಪಾದನೆಗೆ ಒಳಗಾಗುತ್ತಾರೆ. ಈ ರೀತಿಯಲ್ಲಿ ಇಡೀ ಸಾಮಾಜಿಕ ವ್ಯವಸ್ಥೆ ಮತ್ತು ನಾಗರೀಕತೆಯು ಕೊಲೆಗಾರರು, ಕಳ್ಳರು, ಮೋಸಗಾರರಿಗೆ ಕುಬ್ಜಗೊಂಡುಬಿಡುತ್ತದೆ. ನಾವು ಉದ್ದೇಶವನ್ನು ನಿರ್ಲಕ್ಷಿಸುತ್ತೇವೆಂದರೆ, ಸರ್ಕಾರವು ತನ್ನ ಜನರಿಂದ ಮತ್ತು ಅಧಿಕಾರಿಗಳಿಂದ ತ್ಯಾಗವನ್ನು ನಿರೀಕ್ಷಿಸಲು ಹಕ್ಕೇ ಇಲ್ಲ. ಉದ್ದೇಶವನ್ನು ನಿರ್ಲಕ್ಷಿಸಿದರೆ ಪ್ರತಿ ಧಾರ್ಮಿಕ ಬೋಧಕರು ಸುಳ್ಳುಗಳನ್ನು ಬೋಧಿಸುವವರು ಮತ್ತು ಪ್ರವಾದಿಯು ಕೋಟ್ಯಾಂತರ ಸರಳ ಮತ್ತು ಮುಗ್ಧ ಜನರನ್ನು ಹಾದಿ ತಪ್ಪಿಸುತ್ತಿರುವವರು ಎಂದು ಆಪಾದನೆ ಮಾಡಬೇಕಾಗುತ್ತದೆ.

ನಾವು ಉದ್ದೇಶವನ್ನು ಬದಿಗಿಡುತ್ತೇವೆಂದರೆ ಜೀಸಸ್ ಕ್ರಿಸ್ತನು ಗಲಭೆಯನ್ನು ಸೃಷ್ಟಿಸುವುದಕ್ಕೆ, ಶಾಂತಿಯನ್ನು ಹಾಳು ಮಾಡಿರುವುದಕ್ಕೆ ಮತ್ತು ಬಂಡಾಯವನ್ನು ಬೋಧಿಸಿರುವುದಕ್ಕೆ ಹೊಣೆಗಾರನಾದ ಮನುಷ್ಯನಾಗಿ ಕಾಣಿಸುತ್ತಾನೆ ಮತ್ತು ಕಾನೂನಿನ ಭಾಷೆಯಲ್ಲಿ “ಅಪಾಯಕಾರಿ ವ್ಯಕ್ತಿತ್ವ” ಎಂದು ಪರಿಗಣಿತವಾಗುತ್ತದೆ. ನಾವು ಅವನನ್ನು ಆರಾಧಿಸುತ್ತೇವೆ. ಅವನಿಗೆ ನಮ್ಮ ಹೃದಯದಲ್ಲಿ ಅತ್ಯುನ್ನತ ಗೌರವ ಸ್ಥಾನ ಇದೆ ಮತ್ತು ಅವನ ಪ್ರತಿಬಿಂಬವು ನಮ್ಮ ನಡುವೆ ಆಧ್ಯಾತ್ಮದ ಕಂಪನವನ್ನು ಸೃಷ್ಟಿಸುತ್ತದೆ. ಯಾಕೆ? ಯಾಕೆಂದರೆ, ಅವನ ಕೃತ್ಯಗಳ ಹಿಂದಿದ್ದ ಸ್ಫೂರ್ತಿಯು ಉನ್ನತವಾದ ಆದರ್ಶದಿಂದ ಕೂಡಿತ್ತು. ಆ ಕಾಲದ ಆಳುವವರು ಆ ಅತ್ಯುನ್ನತ ಆದರ್ಶವಾದವನ್ನು ಗುರುತು ಮಾಡಲಾರದೇ ಹೋದರು. ಅವರು ಬರಿ ಅವನ ಕೃತ್ಯಗಳನ್ನು ಅಸಾಂದರ್ಭಿಕವಾಗಿ ನೋಡಿದರು. ಆ ನಂತರ 19 ಶತಮಾನಗಳು ಕಳೆದುಹೋದವು. ಈ ಅವಧಿಯಲ್ಲಿ ನಾವು ಪ್ರಗತಿ ಸಾಧಿಸಿಲ್ಲವೆ? ಆ ತಪ್ಪನ್ನು ಮತ್ತೆ ಪುನರಾವರ್ತಿಸಬೇಕೆ? ಅದು ಆ ರೀತಿಯೆಂದಾದರೆ, ನಾವು ಮನುಷ್ಯ ಕುಲದ ಎಲ್ಲಾ ತ್ಯಾಗಗಳು ಮತ್ತು ಮಹೋನ್ನತ ಹುತಾತ್ಮರ ಎಲ್ಲಾ ಪ್ರಯತ್ನಗಳು ಉಪಯೋಗವಿಲ್ಲವೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ ಮತ್ತು ಹಾಗಿದ್ದರೆ 20 ಶತಮಾನಗಳ ಹಿಂದೆ ನಾವು ಎಲ್ಲಿ ನಿಂತಿದ್ದೆವೋ ಈಗಲೂ ಅಲ್ಲೇ ನಿಂತಿದ್ದೇವೆಂದು ಭಾಸವಾಗುತ್ತದೆ.

ಕಾನೂನಿನ ಅಂಶಗಳ ದೃಷ್ಟಿಯಿಂದಲೂ ಕೂಡ ಉದ್ದೇಶದ ಪ್ರಶ್ನೆಯು ವಿಶೇಷ ಮಹತ್ವದ್ದಾಗಿದೆ. ಜನರಲ್ ಡಯರ್‌ನ ಉದಾಹರಣೆಯನ್ನೇ ತೆಗೆದುಕೊಳ್ಳಿ. ಅವನು ನೂರಾರು ಮುಗ್ಧ ಮತ್ತು ನಿರಾಯುಧ ಜನರನ್ನು ಗುಂಡು ಹಾರಿಸಿ ಕೊಲ್ಲಲು ಕಾರಣವಾದ. ಆದರೆ ಮಿಲಿಟರಿ ನ್ಯಾಯಾಲಯವು ಗುಂಡು ಹಾರಿಸಿ ಅವನನ್ನು ಕೊಲ್ಲಲು ಆದೇಶಿಸಲಿಲ್ಲ. ಅದು ಅವನಿಗೆ ಲಕ್ಷಾಂತರ ರೂಪಾಯಿಗಳ ಬಹುಮಾನ ಕೊಟ್ಟಿತ್ತು. ಇನ್ನೊಂದು ಉದಾಹರಣೆ ತೆಗೆದುಕೊಳ್ಳೋಣ. ಶ್ರೀ ಖರಗ್ ಬಹದ್ದೂರ್ ಸಿಂಗ್ ಒಬ್ಬ ಯುವ ಗೂರ್ಖ. ಕಲ್ಕತ್ತದಲ್ಲಿ ಒಬ್ಬ ಮಾರ್ವಾಡಿಯನ್ನು ಕೊಂದ. ಉದ್ದೇಶವನ್ನು ಬದಿಗಿಟ್ಟರೆ ಅವನನ್ನು ಗಲ್ಲಿಗೆ ಹಾಕಬೇಕು. ಆದರೆ ಅವನಿಗೆ ಕೆಲವೇ ವರ್ಷಗಳ ಲಘು ಶಿಕ್ಷೆಯನ್ನು ವಿಧಿಸಲಾಯಿತು. ಅವನ ಶಿಕ್ಷೆಯು ಮುಗಿಯುವ ಬಹು ಮೊದಲೆ ಅವನನ್ನು ಬಿಡುಗಡೆ ಕೂಡ ಮಾಡಲಾಯಿತು. ಅವನು ಮರಣದಂಡನೆಯಿಂದ ತಪ್ಪಿಸಿಕೊಳ್ಳಲು ಕಾನೂನಿನಲ್ಲಿ ಏನಾದರೂ ಹುಳುಕುಗಳಿದ್ದವೆ? ಅಥವಾ, ಅವನ ವಿರುದ್ಧ ಕೊಲೆಯ ಆಪಾದನೆ ಸಾಬೀತಾಗಲಿಲ್ಲವೆ? ನಮ್ಮಂತೆ ಅವನು ಕೂಡ ಅವನ ಕೃತ್ಯದ ಸಂಪೂರ್ಣ ಜವಾಬ್ದಾರಿಯನ್ನು ಒಪ್ಪಿಕೊಂಡ. ಆದರೆ ಅವನು ಸಾವಿನಿಂದ ತಪ್ಪಿಸಿಕೊಂಡ. ಈಗ ಅವನು ಬಿಡುಗಡೆಯಾಗಿದ್ದಾನೆ. ನಾನು ಸನ್ಮಾನ್ಯರಾದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಅವನಿಗೆ ಯಾಕೆ ಮರಣದಂಡನೆಯನ್ನು ವಿಧಿಸಲಿಲ್ಲ? ಅವನ ಕೃತ್ಯವು ಒಳ್ಳೆಯ ಲೆಕ್ಕಾಚಾರದಿಂದ ಕೂಡಿತ್ತು

ಮತ್ತು ಚೆನ್ನಾಗಿ ಯೋಜಿಸಲ್ಪಟ್ಟಿತ್ತು. ಉದ್ದೇಶವನ್ನು ನೋಡುವುದಾದರೆ, ಅವನ ಕೃತ್ಯವು ನಮ್ಮ ಕೃತ್ಯಕ್ಕಿಂತ ಹೆಚ್ಚು ಗಂಭೀರವಾದುದು ಮತ್ತು ಹೆಚ್ಚು ಕ್ರೂರವಾದುದು. ಅವನಿಗೆ ಲಘು ಶಿಕ್ಷೆಯನ್ನು ವಿಧಿಸಲಾಯಿತು. ಯಾಕೆಂದರೆ ಅವನ ಉದ್ದೇಶವು ಒಳ್ಳೆಯದು ಆಗಿತ್ತು. ಅವನು ಪಾಪದ ಯುವ ಹುಡುಗಿಯರ ಜೀವರಕ್ತವನ್ನು ಹೀರುವ ಕೊಳಕು ಜಿಗಣೆಯಾಗಿದ್ದ ಮಾರ್ವಾಡಿಯಿಂದ ಸಮಾಜವನ್ನು ರಕ್ಷಿಸಿದ. ಖರಗ್‌ಸಿಂಗ್‌ಗೆ ಕಾನೂನಿನ ಔಪಚಾರಿಕತೆಯನ್ನು ಎತ್ತಿಹಿಡಿಯುವುದಕ್ಕೋಸ್ಕರ ಮಾತ್ರವೇ ಲಘು ಶಿಕ್ಷೆಯನ್ನು ವಿಧಿಸಲಾಯಿತು.

ಈ ತತ್ವವು ಕೆಟ್ಟದ್ದಾಗಿದೆ. ಇದು ಕಾನೂನಿನ ಮೂಲಭೂತ ತತ್ವವಾದ “ಕಾನೂನು ಮನುಷ್ಯನಿಗೋಸ್ಕರ, ಮನುಷ್ಯ ಕಾನೂನಿಗೋಸ್ಕರ ಅಲ್ಲ” ಎಂಬ ತತ್ವದ ವಿರುದ್ಧವಾಗಿದೆ. ಹಾಗಿದ್ದರೆ ಅದೇ ವಿಧಿಗಳು ನಮಗೂ ಕೂಡ ಏಕೆ ಅನ್ವಯವಾಗುವುದಿಲ್ಲ? ಅದು ಸ್ಪಷ್ಟವಾಗಿರುವುದೆ ಖರಗ್‌ಸಿಂಗ್‌ನಿಗೆ ಶಿಕ್ಷೆ ವಿಧಿಸುವಾಗ ಅವನ ಉದ್ದೇಶವನ್ನು ಪರಿಗಣಿಸಲ್ಪಟ್ಟಾಗ. ಇಲ್ಲದಿದ್ದಲ್ಲಿ ಒಬ್ಬ ಕೊಲೆಗಾರ ನೇಣು ಹಾಕುವವನ ಹಗ್ಗದಿಂದ ತಪ್ಪಿಸಿಕೊಳ್ಳಲಾರನು. ನಮ್ಮ ಅಪರಾಧವು ಸರ್ಕಾರದ ವಿರುದ್ಧ ಅಥವಾ ನಮ್ಮ ಕೃತ್ಯವು ರಾಜಕೀಯ ಮಹತ್ವವನ್ನು ಪಡೆದುಕೊಂಡಿದೆ ಎಂಬ ಕಾರಣಕ್ಕಾಗಿ, ಕಾನೂನಿನ ಸಾಮಾನ್ಯ ಲಾಭವು ನಮ್ಮಿಂದ ಕಸಿದುಕೊಳ್ಳಲ್ಪಡುತ್ತಿದೆಯೋ.

ಮೈ ಲಾರ್ಡ್ಸ್, ಈ ಸಾಂದರ್ಭಿಕ ಹಿನ್ನಲೆಯಲ್ಲಿ ಸರ್ಕಾರವು ಅಂತಹ ಕೊಳಕು ವಿಧಾನಗಳ ಹಿಂದೆ ಆಶ್ರಯ ಪಡೆದುಕೊಳ್ಳಲು ನೋಡುತ್ತಾ, ಅದು ಅಸ್ತಿತ್ವದಲ್ಲಿರಲು ಹಕ್ಕು ಇಲ್ಲ ಎಂದು ಸಂದರ್ಭಗಳ ಹಿನ್ನಲೆಗಳಲ್ಲಿ ಗಟ್ಟಿಯಾಗಿ ಹೇಳಲು ನಮಗೆ ಅವಕಾಶ ಕೊಡಿ, ಅದು ಅಸ್ತಿತ್ವದಲ್ಲಿದ್ದರೆ ಅದು ಕೆಲವೇ ಸಮಯ ಮಾತ್ರ ಮತ್ತು ಅದೂ ಸಹ ಅದರ ತಲೆಯ ಮೇಲೆ ಸಾವಿರಾರು ಜನರ ರಕ್ತದೊಂದಿಗೆ ಅಷ್ಟೇ. ಕಾನೂನು  ಉದ್ದೇಶವನ್ನು ನೋಡದಿದ್ದರೆ ಅಲ್ಲಿ ನ್ಯಾಯವಿರಲು ಸಾಧ್ಯವಿಲ್ಲ. ಅಲ್ಲಿ ಸ್ಥಿರವಾದ ಶಾಂತಿ ಇರಲು ಸಾಧ್ಯವಿಲ್ಲ. ಅಕ್ಕಿಯಲ್ಲಿ ವಿಷವನ್ನು ಮಿಶ್ರ ಮಾಡುವುದು ಅದರ ಉದ್ದೇಶವು ಇಲಿಗಳನ್ನು ಕೊಲ್ಲುವುದಾಗಿದ್ದಾಗ ಅದು ಅಪರಾಧವೆಂದು ಪರಿಗಣಿಸಲ್ಪಡುವುದಿಲ್ಲ. ಆದರೆ ಅದರ ಉದ್ದೇಶವು ಮನುಷ್ಯನನ್ನು ಕೊಲ್ಲುವುದಿದ್ದಾಗ ಅದು ಕೊಲೆಯ ಅಪರಾಧವಾಗುತ್ತದೆ. ಆದ್ದರಿಂದ ಕಾರಣವನ್ನು ಪರೀಕ್ಷೆಗೊಳಪಡಿಸಲು ಕಾನೂನುಗಳು ಮತ್ತು ನ್ಯಾಯದ ತತ್ವಗಳಿಗೆ ವಿರುದ್ಧವಾದಂತಹ ಕಾನೂನುಗಳನ್ನು ತೊಡೆದುಹಾಕಬೇಕು. ಅಂತಹ ಅನ್ಯಾಯಯುತ ಕಾನೂನುಗಳಿಂದಲೇ ಹಲವು ಉನ್ನತ ಬುದ್ಧಿಜೀವಿಗಳು ದಂಗೆಯ ದಾರಿಯನ್ನು ಅಳವಡಿಸಿಕೊಂಡಿದ್ದಾರೆ.

ನಮ್ಮ ಕೇಸಿನ ವಾಸ್ತವಾಂಶಗಳು ಸರಳವಾಗಿವೆ. 1929ರ ಏಪ್ರಿಲ್ 8ರಂದು ನಾವು ಶಾಸನ ಸಭೆಯಲ್ಲಿ ಎರಡು ಬಾಂಬುಗಳನ್ನು ಎಸೆದೆವು. ಆ ಸ್ಫೋಟದ ಪರಿಣಾಮದಿಂದ ಕೆಲವು ವ್ಯಕ್ತಿಗಳಿಗೆ ಸಣ್ಣ ತರಚಿದ ಗಾಯಗಳಾದವು. ಸದನಕೊಠಡಿಯಲ್ಲಿ ಗಲಿಬಿಲಿ ಉಂಟಾಯಿತು. ನೂರಾರು ವೀಕ್ಷಕರು ಮತ್ತು ಶಾಸನ ಸಭೆಯ ಸದಸ್ಯರು ಹೊರಗೆ ಓಡಿದರು. ನಾನು ಮತ್ತು ನನ್ನ ಸ್ನೇಹಿತ ಬಟುಕೇಶ್ವರ ದತ್ ಇಬ್ಬರು ಮಾತ್ರ ಆ ವೀಕ್ಷಕರ ಚಾವಡಿಯಲ್ಲಿ ಉಳಿದುಕೊಂಡೆವು ಮತ್ತು ನಮ್ಮನ್ನು ಬಂಧಿಸಲು ಕೇಳಿಕೊಂಡೆವು. ನಮ್ಮನ್ನು ಕೊಲೆಯ ಪ್ರಯತ್ನಕ್ಕಾಗಿ ವಿಚಾರಣೆಗೆ ಒಳಪಡಿಸಲಾಯಿತು ಮತ್ತು ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಯಿತು. ಮೇಲೆ ತಿಳಿಸಿದಂತೆ ಆ ಬಾಂಬಿನ ಸ್ಫೋಟದಿಂದಾಗಿ ನಾಲ್ಕು ಅಥವಾ ಐದು ಜನ ಮಾತ್ರ ಸ್ವಲ್ಪವೇ ಗಾಯಗೊಂಡರು ಮತ್ತು ಒಂದು ಬೆಂಚು ಹಾನಿಗೊಳಗಾಯಿತು. ನಾವು ಯಾವುದೇ ಪ್ರತಿರೋಧವಿಲ್ಲದೆ ನಮ್ಮನ್ನು ಬಂಧಿಸಲು ಕೇಳಿಕೊಂಡೆವು. ಒಂದು ವೇಳೆ ನಾವು ತಪ್ಪಿಸಿಕೊಳ್ಳುವ ಉದ್ದೇಶ ಹೊಂದಿದ್ದರೆ ಸುಲಭವಾಗಿ ಹಾಗೆ ಮಾಡಬಹುದಿತ್ತು ಎಂದು ಸೆಷೆನ್ಸ್ ನ್ಯಾಯಾಧೀಶರು ಒಪ್ಪಿಕೊಂಡಿದ್ದರು. ನಮ್ಮ ಅಪರಾಧವನ್ನು ನಾವು ಒಪ್ಪಿಕೊಂಡೆವು ಮತ್ತು ಯಾಕೆ ಹಾಗೆ ಮಾಡಿದೆವೆಂದು ವಿವರಿಸಿ ಹೇಳಿಕೆ ಕೊಟ್ಟೆವು. ನಾವು ಶಿಕ್ಷೆಗೆ ಹೆದರಿಲ್ಲ. ಆದರೆ ನಮ್ಮನ್ನು ತಪ್ಪು ತಿಳಿದುಕೊಳ್ಳಬಾರದೆಂದು ನಾವು ಬಯಸುತ್ತೇವೆ. ನ್ಯಾಯಾಧೀಶರು ನಮ್ಮ ಹೇಳಿಕೆಯಿಂದ ಕೆಲವು ಭಾಗಗಳನ್ನು ತೆಗೆದುಹಾಕಿದ್ದಾರೆ. ಇದು ನಮ್ಮ ನೈಜ ನಿಲುವುಗಳಿಗೆ ಅಪಾಯಕಾರಿಯಾದುದೆಂದು ನಾವು ಪರಿಗಣಿಸುತ್ತೇವೆ.

ನಮ್ಮ ಅಭಿಪ್ರಾಯದ ಪ್ರಕಾರ ನಮ್ಮ ದೇಶವು ಒಂದು ಸೂಕ್ಷ್ಮ ಹಂತದ ಮೂಲಕ ಸಾಗುತ್ತಿದೆ. ನಮ್ಮ ಹೇಳಿಕೆಯ ಸಂಪೂರ್ಣ ಪಾಠವನ್ನು ಸರಿಯಾಗಿ ಅಧ್ಯಯನ ಮಾಡಿದರೆ ಇದು ಸ್ಪಷ್ಟಪಡುತ್ತದೆ. ನಾವು ಬರಲಿರುವ ಅಪಾಯವನ್ನು ಗ್ರಹಿಸಿದೆವು ಮತ್ತು ದೊಡ್ಡ ಧ್ವನಿಯೊಂದಿಗೆ ಸಮಯೋಚಿತವಾದ ಎಚ್ಚರಿಕೆಯನ್ನು ಕೊಡುವುದು ಸರಿಯಾದುದು ಎಂದು ಆಲೋಚಿಸಿದೆವು. ಮತ್ತು ಯಾವ ವಿಧಾನದಲ್ಲಿ ಸರಿಯಾದುದೆಂದು ಆಲೋಚಿಸಿದೆವೋ ಹಾಗೆಯೆ ಎಚ್ಚರಿಕೆ ಕೊಟ್ಟೆವು. ನಾವು ಮಾಡಿದ್ದು ತಪ್ಪಿರಬಹುದು. ನಮ್ಮ ಆಲೋಚನೆಯ ಪಥ ಮತ್ತು ಸನ್ಮಾನ್ಯ ನ್ಯಾಯಾಧೀಶರ ಆಲೋಚನೆಗಳಲ್ಲಿ ವ್ಯತ್ಯಾಸಗಳಿರಬಹುದು. ಆದರೆ ಅದರ ಅರ್ಥ ನಮ್ಮ ಆಲೋಚನೆಗಳನ್ನು ಅಭಿವ್ಯಕ್ತಿಸಲು ಅನುಮತಿ ಕೊಡುವುದನ್ನು ಕಸಿದುಕೊಳ್ಳಬಹುದು ಎಂದು ಅರ್ಥವಲ್ಲ. ನಮ್ಮ ಹೆಸರಿನಲ್ಲಿ ತಪ್ಪುತಪ್ಪು ಪ್ರಚಾರ ಮಾಡಬಹುದೆಂದು ಅದರ ಅರ್ಥವಲ್ಲ.

ನಮ್ಮ ಹೇಳಿಕೆಯಲ್ಲಿ “ಕ್ರಾಂತಿ ಚಿರಾಯುವಾಗಲಿ ಮತ್ತು ಸಾಮ್ರಾಜ್ಯವಾದ ಅಳಿಯಲಿ” ಅಂದರೆ ಏನೆಂದು ನಾವು ವಿವರವಾಗಿ ವಿವರಿಸಿದ್ದೇವೆ. ಅದು ನಮ್ಮ ಆಲೋಚನೆಯ ತಿರುಳನ್ನು ರೂಪಿಸಿದೆ. ನಮ್ಮ ಹೇಳಿಕೆಯಿಂದ ಆ ಭಾಗವನ್ನು ತೆಗೆದುಹಾಕಲಾಗಿದೆ. ಸಾಮಾನ್ಯವಾಗಿ ಕ್ರಾಂತಿ ಎಂಬ ಪದಕ್ಕೆ ತಪ್ಪು ಅರ್ಥವನ್ನು ಆರೋಪಿಸಲಾಗಿದೆ. ಬಾಂಬುಗಳು ಮತ್ತು ಪಿಸ್ತೂಲುಗಳು ಕ್ರಾಂತಿಯನ್ನು ಮಾಡುವುದಿಲ್ಲ, ಅದು ನಮ್ಮ ತಿಳುವಳಿಕೆಯಲ್ಲ. ಚಿಂತನೆಗಳ ಮಸೆಯುವ ಕಲ್ಲುಗಳಿಂದ ಕ್ರಾಂತಿಯ ಖಡ್ಗವು ಹರಿತವಾಗಿದೆ. ಇದನ್ನು ನಾವು ಒತ್ತುಕೊಡಬೇಕೆಂದು ಬಯಸಿದ್ದೆವು. ನಮ್ಮ ಅರ್ಥದಲ್ಲಿ, ಕ್ರಾಂತಿಯಿಂದ ಬಂಡವಾಳಶಾಹಿ ಯುದ್ಧಗಳ ನರಳಿಕೆಗಳು ಕೊನೆಯಾಗುತ್ತವೆ. ನಮ್ಮ ಗುರಿ ಮತ್ತು ಉದ್ದೇಶಗಳು ಮತ್ತು ಅವನ್ನು ಸಾಧಿಸುವ ಪ್ರಕ್ರಿಯೆಗಳು ಇವುಗಳ ತಿಳುವಳಿಕೆಯಿಲ್ಲದೆ ನ್ಯಾಯ ತೀರ್ಮಾನವನ್ನು ಘೋಷಿಸುವುದು ಸರಿಯಾದುದಲ್ಲ, ನಮ್ಮ ಹೆಸರಿನ ಜೊತೆಗೆ ತಪ್ಪು ಚಿಂತನೆಗಳನ್ನು ಸೇರಿಸುವುದು ಅತ್ಯಂತ ಅನ್ಯಾಯಯುತವಾದುದು.

ಜನರ ಕ್ಷೋಭೆ ಹೆಚ್ಚುತ್ತಿದೆ! ಅದನ್ನು ಸರಿಯಾದ ಸಮಯ ಮತ್ತು ವಿಧಾನದಲ್ಲಿ ಸರಿಪಡಿಸಿಲ್ಲವೆಂದರೆ ಅದು ಗಂಭೀರವಾದ ತಿರುವನ್ನು ಪಡೆದುಕೊಳ್ಳುವ ಲಕ್ಷಣ ಹೊಂದಿದೆ. ಇದರ ಬಗ್ಗೆ ಸಮಯೋಚಿತವಾದಂತಹ ಎಚ್ಚರಿಕೆಯನ್ನು ಕೊಡಬೇಕಾದದ್ದು ಅಗತ್ಯವಾಗಿತ್ತು. ನಮ್ಮ ಎಚ್ಚರಿಕೆಯನ್ನು ಪರಿಗಣಿಸಿಲ್ಲವೆಂದರೆ ಯಾವ ಮಾನವ ಶಕ್ತಿಯೂ ಕೂಡ ಅದನ್ನು ತಡೆಯಲು ಸಾಧ್ಯವಿಲ್ಲ. ನಾವು ಬಿರುಗಾಳಿಗೆ ಒಂದು ಸರಿಯಾದ ದಿಕ್ಕನ್ನು ತೋರಿಸಲು ಈ ಕ್ರಮವನ್ನು ತೆಗೆದುಕೊಂಡಿದ್ದೇವೆ. ನಾವು ಚರಿತ್ರೆಯ ಗಂಭೀರ ವಿದ್ಯಾರ್ಥಿಗಳು. ಸರಿಯಾದ ಸಮಯದಲ್ಲಿ ಆಳುವ ಶಕ್ತಿಗಳು ಸರಿಯಾಗಿ ವರ್ತಿಸಿದ್ದರೆ, ಫ್ರಾನ್ಸ್ ಮತ್ತು ರಷ್ಯಾದಲ್ಲಿ ರಕ್ತರಂಜಿತ ಕ್ರಾಂತಿಗಳು ಸಂಭವಿಸುತ್ತಿರಲಿಲ್ಲವೆಂದು ನಾವು ಭಾವಿಸುತ್ತೇವೆ. ಪ್ರಪಂಚದ ಹಲವು ದೊಡ್ಡ ಶಕ್ತಿಗಳು ಚಿಂತನೆಗಳ ಬಿರುಗಾಳಿಯನ್ನು ತಡೆಗಟ್ಟಲು ಮತ್ತು ರಕ್ತದೋಕುಳಿಯ ವಾತಾವರಣದಲ್ಲಿ ಮುಳುಗಿಸಲು ಪ್ರಯತ್ನಿಸಿದವು. ಆಳುವ ಜನರು ವಿದ್ಯುತ್ ಪ್ರವಾಹವನ್ನು ಬದಲಿಸಲಾರರು. ನಾವು ಮೊದಲ ಎಚ್ಚರಿಕೆಯನ್ನು ಕೊಡಲು ಬಯಸಿದೆವು. ನಾವು ಕೆಲವು ಮುಖ್ಯ ವ್ಯಕ್ತಿಗಳನ್ನು ಕೊಲ್ಲುವ ಗುರಿ ಹೊಂದಿದ್ದರೆ ನಮ್ಮ ಗುರಿಯನ್ನು ಸಾಧಿಸಲು ನಾವು ವಿಫಲವಾಗುತ್ತಿದ್ದೆವು.

ಮೈ ಲಾರ್ಡ್ಸ್, ಇದು ನಮ್ಮ ಕೃತ್ಯದ ಹಿಂದಿದ್ದ ಗುರಿ, ಸ್ಫೂರ್ತಿಯನ್ನು ಮತ್ತು ಆ ಕೃತ್ಯದ ಫಲಿತಾಂಶವನ್ನು ನಮ್ಮ ಹೇಳಿಕೆಯಲ್ಲಿ ವಿವರಿಸಿದ್ದೇವೆ. ಇನ್ನೂ ಒಂದು ಮುಖ್ಯ ಅಂಶವನ್ನು ಸ್ಪಷ್ಟಪಡಿಸಬೇಕಾದ ಅವಶ್ಯಕತೆಯಿದೆ. ಅದೆಂದರೆ ಬಾಂಬಿನ ಸಾಮರ್ಥ್ಯದ ವಿಚಾರ. ಬಾಂಬುಗಳ ಸಾಮರ್ಥ್ಯದ ಬಗ್ಗೆ ನಮಗೆ ಅಂದಾಜಿಲ್ಲದಿದ್ದರೆ ನಮ್ಮ ಗೌರವಾನ್ವಿತ ರಾಷ್ಟ್ರೀಯ ನಾಯಕರಾದ ಪಂಡಿತ್ ಮೋತಿಲಾಲ್ ನೆಹರು, ಶ್ರೀ ಕೇಳ್ಕರ್, ಶ್ರೀ ಜೈಕರ್ ಮತ್ತು ಶ್ರೀ ಜಿನ್ನಾರಂತಹವರು ಅಲ್ಲಿ ಹಾಜರಿರುವಾಗಲೆ ಅವುಗಳನ್ನು ಎಸೆಯುವ ಪ್ರಶ್ನೆಯೇ ಬರುತ್ತಿರಲಿಲ್ಲ. ನಮ್ಮ ನಾಯಕರ ಜೀವಗಳನ್ನು ಹಾಗೆ ಅಪಾಯಕ್ಕೊಡ್ಡುವುದು ಹೇಗೆ ಸಾಧ್ಯ? ಯಾವುದೇ ಕಾರಣಕ್ಕೂ ನಾವು ಹುಚ್ಚರಲ್ಲ, ಹಾಗಾಗಿದ್ದರೆ ನಮ್ಮ ಜೈಲಲ್ಲಿಡುವ ಬದಲು ಖಚಿತವಾಗಿ ಮತಿಭ್ರಾಂತರ ಆಶ್ರಮಕ್ಕೆ ಕಳುಹಿಸಬಹುದಿತ್ತು.

ನಮಗೆ ಬಾಂಬುಗಳ ಸಾಮರ್ಥ್ಯದ ಬಗ್ಗೆ ಸಂಪೂರ್ಣ ತಿಳುವಳಿಕೆ ಇತ್ತು ಮತ್ತು ಅದಕ್ಕಾಗಿಯೇ ಅಷ್ಟು ಆತ್ಮವಿಶ್ವಾಸದಿಂದ ಆ ಕೃತ್ಯ ನಡೆಸಿದೆವು. ಅದನ್ನು ಕುಳಿತಿದ್ದ ಬೆಂಚುಗಳ ಮೇಲೆ ಎಸೆಯುವುದು ಬಹಳ ಸುಲಭ, ಆದರೆ ಯಾರೂ ಕುಳಿತಿಲ್ಲದ ಕಡೆ ಎಸೆಯುವುದೇ ಕಷ್ಟ. ನಾವು ಸರಿಯಾದ ಮನಸ್ಥಿತಿಯಲ್ಲಿ ಇಲ್ಲದಿರುತ್ತಿದ್ದರೆ ಅಥವಾ ನಾವು ಮಾನಸಿಕ ಅಸಮತೋಲನ ಹೊಂದಿದ್ದರೆ ಬಾಂಬುಗಳು ಖಾಲಿ ಜಾಗದಲ್ಲಿ ಬೀಳುತ್ತಿರಲಿಲ್ಲ. ಬದಲಾಗಿ ಕುಳಿತ ಬೆಂಚುಗಳ ಮೇಲೆ ಬೀಳುತ್ತಿದ್ದವು.

ಆದ್ದರಿಂದ ನಾವು ಹೇಳುತ್ತಿರುವುದೇನೆಂದರೆ, ಖಾಲಿ ಜಾಗವನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಿಕೊಳ್ಳಲು ನಾವು ತೋರಿಸಿದ ಸ್ಥೈರ್ಯಕ್ಕಾಗಿ ನಮ್ಮನ್ನು ಸನ್ಮಾನಿಸಬೇಕಾಗಿದೆ. ಈ ಪರಿಸ್ಥಿತಿಯಡಿಯಲ್ಲಿ, ಮೈ ಲಾರ್ಡ್ಸ್, ನಮ್ಮನ್ನು ಅರ್ಥ ಮಾಡಿಕೊಂಡಿಲ್ಲವೆಂದು ನಾವು ಭಾವಿಸುತ್ತೇವೆ. ಶಿಕ್ಷೆಯನ್ನು ಕಡಿತಗೊಳಿಸಿ ಎಂದು ಕೇಳಲು ನಾವು ನಿಮ್ಮ ಮುಂದೆ ಬಂದಿಲ್ಲ. ನಮ್ಮ ಸ್ಥಿತಿಯ ಬಗ್ಗೆ ಸ್ಪಷ್ಟನೆ ನೀಡಲು ನಾವಿಲ್ಲಿ ಬಂದಿದ್ದೇವೆ. ಯಾವುದೇ ಅನ್ಯಾಯಯುತ ರೀತಿಯಲ್ಲಿ ನಮ್ಮನ್ನು ನಡೆಸಿಕೊಳ್ಳಬಾರದು ಮತ್ತು ನಮ್ಮ ಬಗ್ಗೆ ಯಾವುದೇ ಅನ್ಯಾಯಯುತ ಅಭಿಪ್ರಾಯಗಳನ್ನು ಉಚ್ಚಾರಣೆ ಮಾಡಬಾರದು ಎಂದು ನಾವು ಬಯಸುತ್ತೇವೆ. ಶಿಕ್ಷೆಯ ಪ್ರಶ್ನೆಯು ನಮಗೆ ದ್ವಿತೀಯ ಮಹತ್ವದ್ದಾಗಿದೆ.

ಭಾರತ ದೇಶದ ಮಹಾನ್ ಕ್ರಾಂತಿಕಾರಿ ಭಗತ್ ಸಿಂಗ್‌ರ ಬಗ್ಗೆ ಹಲವು ರೀತಿಯ ತಪ್ಪು ಗ್ರಹಿಕೆಗಳನ್ನು ಹರಡಲಾಗುತ್ತಿದೆ. ಗಾಂಧಿಗಿಂತಲೂ ಎರಡುಪಟ್ಟು ಜನಅಭಿಮಾನ ಗೌರವ ಗಳಿಸಿ ಕ್ರಾಂತಿಕಾರಿ ಜನತೆಯ ಸ್ಫೂರ್ತಿಯಾಗಿದ್ದ ಭಗತ್ ಸಿಂಗ್‌ರ ಮಹಾನ್ ಧ್ಯೇಯೋದ್ದೇಶಗಳನ್ನು ತಿರುಚಿ ಪ್ರಚಾರ ಮಾಡಲಾಗುತ್ತಿದೆ. ಭಾರತದ ಜನತೆಗೆ ಎಂದೋ ದ್ರೋಹ ಬಗೆದಿರುವ ಸಿಪಿಐ, ಸಿಪಿಐ (ಎಂ) ಪಕ್ಷಗಳು, ಅವುಗಳ ಎಸ್.ಎಫ್.ಐ, ಡಿ.ವೈ.ಎಫ್.ಗಳಂತಹವುಗಳು, ಪ್ರತಿಗಾಮಿ ಹಿಂದೂ ಫ್ಯಾಸಿಸ್ಟ್ ಸಂಘಟನೆಯಾದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ಗಳಂತಹವುಗಳು, ಇತರ ಚುನಾವಣಾ ರಾಜಕೀಯ ಪಕ್ಷಗಳು ಭಗತ್ ಸಿಂಗ್‌ರ ವಾರಸುದಾರರೆಂಬಂತೆ ಫೋಸು ನೀಡುತ್ತಿವೆ. ಇವರೆಲ್ಲಾ ಸಾಮ್ರಾಜ್ಯಶಾಹಿಗಳ, ದೊಡ್ಡ ಭೂಮಾಲೀಕರ, ದಲ್ಲಾಳಿ ಬಂಡವಾಳಿಗರ ಏಜೆಂಟರಾಗಿದ್ದುಕೊಂಡು, ತಮ್ಮ ದ್ರೋಹ ವಂಚನೆಗಳನ್ನು ಮರೆ ಮಾಡಲು ಭಗತ್ ಸಿಂಗ್‌ರನ್ನು ಅವರ ಆಶಯಗಳನ್ನು ದುರ್ಬಳಕೆ ಮಾಡುತ್ತಿವೆ. ಭಗತ್ ಸಿಂಗ್ ಮತ್ತವರ ಸಂಗಡಿಗರು ಭಾರತ ದೇಶವನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ, ಬಂಡವಾಳಶಾಹಿಗಳಿಂದ ಮತ್ತು ಊಳಿಗಮಾನ್ಯತೆಯಿಂದ ವಿಮೋಚನೆಗೊಳಿಸಿ ನಿಜವಾದ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವಗಳ ಸಮಾಜವಾದಿ ಸಮಾಜವನ್ನು ನಿರ್ಮಿಸಲಿಕ್ಕಾಗಿ ಅಮೂಲ್ಯ ಪ್ರಾಣವನ್ನೇ ಬಲಿಕೊಟ್ಟ ಮಹಾನ್ ಕ್ರಾಂತಿಕಾರಿ ಹುತಾತ್ಮರಾಗಿದ್ದಾರೆ.

- ಕ್ರಾಂತಿಕಾರಿ ಭಗತ್‌ಸಿಂಗ್‌ರ ವಿಚಾರಗಳನ್ನು ಅರಿಯೋಣ
- ಅವರ ಆಶಯಗಳನ್ನು ಈಡೇರಿಸೋಣ
- ಸಾಮ್ರಾಜ್ಯವಾದ ಭೂಮಾಲೀಕತ್ವಗಳ ವಿರುದ್ಧ ರಾಜಿರಹಿತ ಹೋರಾಟ ನಡೆಸೋಣ

ಆದಿವಾಸಿ ರೈತ-ಕೂಲಿ ಸಂಘ (ARCS)
ಕ್ರಾಂತಿಕಾರಿ ಆದಿವಾಸಿ ಮಹಿಳಾ ಸಂಘ (KAMS)

ಕರ್ನಾಟಕ ರೈತ-ಕೂಲಿ ಸಂಘ (KRCS)
ಮಹಿಳಾ ವಿಮುಕ್ತಿ